
**ಕಥೆ**






## ಅನು ಬೆಳ್ಳೆ

ಕಲೆ: ರಾಮಕೃಷ್ಣ ಸಿದ್ರಪಾಲ


ಆ ಮೌನ ಎಷ್ಟೊಂದು ಕ್ರೂರಿಯಾಗಿತ್ತೆಂದರೆ ಚೂರಿಯ ಮೊನೆಯಂತೆ. ಅದು ಅವನನ್ನು ಚುಚ್ಚಿ ಘಾಸಿಗೊಳಿಸುತ್ತಲೇ ಇತ್ತು. ಅವನು ಸನ್ಯಾಸಿಯಂತೆ ತಾಳ್ಮೆಯಿಂದ ಅದನ್ನು ಸಹಿಸಿಕೊಂಡಿದ್ದ. ದೈಹಿಕವಾದ ಗಾಯಗಳಿಗಿಂತಲೂ ಮಾನಸಿಕವಾಗಿ ಆಗುವ ವೇದನೆಗಳನ್ನು ಅನುಭವಿಸುತ್ತಲೇ ಒಳಗಿಗಿಂತಲೂ ಹೊರಗೆ ಪರಮ ಸಂತೋಷಿಯಂತೆ ಕಾಣಲು ಪ್ರಯತ್ನಿಸುತ್ತಿದ್ದ. ಇವನ್ನೆಲ್ಲಾ ತೋರಿಸಿಕೊಂಡು ತಾನೇಕೆ ಸಣ್ಣವನಾಗಬೇಕೆನ್ನುವ ಅವನ ಅನುಭಾವ ಒಮ್ಮೇಲೆ ಉತ್ಕರ್ಷಿಸಿ ತಾರಾ ಮಂಡಲದ ಉಲ್ಕೆಯಂತೆ ದೂರವಾಗಿ ಬಿಡುವ. ಆಗಲೇ ಎಲ್ಲವೂ ನಡೆದು ಹೋಯಿತು ಎನ್ನುವಂತೆ ಪ್ರತ್ಯಕ್ಷ ಅವನ ಬದುಕಿನೊಳಗೆ ಪ್ರವೇಶಿಸಿದಳು.

ಪ್ರತ್ಯಕ್ಷ ನೋಡುವವರ ಕಣ್ಣಿಗೆ ಜಾರಿಣಿಯಾದರೂ ಅವನ ಮನಸ್ಸಿನ ಅಕ್ಷಿಗೆ ಅನುಭವಿ, ಮಾರ್ಗದರ್ಶಿ, ಹಿತೈಷಿ ಎಲ್ಲವೂ ಆಗಿದ್ದವಳು. ಅವನು ಅವಳನ್ನು ಆದರಿಸಿರಲಿಲ್ಲ. ಅವಳಾಗಿಯೇ ಅವನ ಸೇವೆಗೆಂದು ನಿಂತವಳು. ತನ್ನ ಗತಜನ್ಮದ ಗೆಣೆಯನೆಂದೇ ತಿಳಿದುಕೊಂಡು ಅವನಲ್ಲಿ ಅನುರಕ್ತೆಯಾಗಿ ಬೇಕು ಬೇಡಗಳಿಗೆ ಸ್ಪಂದಿಸಿದವಳು. ಯಾರು ಏನು ಹೇಳಿದರೂ ಕೇಳಿಸಿಕೊಳ್ಳದ ಪ್ರತ್ಯಕ್ಷ ಕೂಡ ಪರಮನಂತೆ ನಿರ್ಲಿಪ್ತ ನಿರ್ಧಾರವನ್ನು ತೆಗೆದುಕೊಂಡು ಇರುವುದನ್ನು ರೂಢಿಸಿಕೊಂಡಳು. ಆ ರೂಢಿಗತವಾದ ದಿನನಿತ್ಯದ ಕಾಯಕದಲ್ಲಿ ಪರಮ ಅವಳಿಗೆ ಯಾವುದೇ ಕಟ್ಟುಪಾಡುಗಳನ್ನು ಹೇರಲಿಲ್ಲ. ಅವಳೂ ಅವನಿಗೆ ಏನನ್ನೂ ಹೇಳಿಯೇ ಮಾಡುವುದೂ ಇಲ್ಲ. ಒಂದು ರೀತಿಯ ಸ್ವಚ್ಛಂದದ ಬದುಕನ್ನು ಅನುಭವಿಸುತ್ತಿದ್ದವಳು. ಇನ್ನು ಮದುವೆ, ಸಂಸಾರವೆನ್ನುವ ಭವದ ಬಂಧನಗಳಿಗೆ ಸಿಲುಕುವ ಸುಲಭದ ಹೆಣ್ಣಲ್ಲ ಅವಳು. ಆ ಬಂಧನದಿಂದ ದಗಲಬಾಜಿಯ ಸೆರೆಯನ್ನು ಅನುಭವಿಸುವ ಮೂರ್ಖನಲ್ಲ ಪರಮ.

ಹೀಗೆ ಪರಮ, ಪ್ರತ್ಯಕ್ಷ ಇಬ್ಬರೂ ನೋಡುಗರ ಕಣ್ಣಿಗೆ ಅನ್ಯೋನ್ಯವಾಗಿ ಬದುಕುತ್ತಿದ್ದಾರೆನ್ನುವಂತೆ ಕಂಡರೂ ಅವರಿಬ್ಬರೂ ಎರಡು ಧ್ರುವಗಳಂತೆ ಜೀವಿಸಲು ಇಷ್ಟಪಡುತ್ತಿದ್ದವರು. ತಮ್ಮಿಬ್ಬರ ಬದುಕಿನ ಜಾಡಿನಲ್ಲಿ ಅರ್ಥವನ್ನು ಹುಡುಕುತ್ತಾ ಸರಿತಪ್ಪುಗಳ ವಿವೇಚನೆಯನ್ನು ಮಾಡುತ್ತಲೇ ಖುಷಿಯಾಗಿರುವುದಕ್ಕೆ ಪ್ರಯತ್ನಿಸುತ್ತಿದ್ದರು.

ಪರಮ ಸಣ್ಣ ಪುಟ್ಟ ಕೆಲಸಗಳನ್ನು ಮಾಡಿ ಬದುಕುವವನಲ್ಲ. ಸಿಕ್ಕರೆ ಕೊಪ್ಪರಿಗೆಯೇ ಸಿಗಬೇಕೆನ್ನುವ ಧ್ಯೇಯಗಳನ್ನಿಟ್ಟುಕೊಂಡು ಸಿಗದ ಕಾಯಕಗಳ ಬೆನ್ನು ಹತ್ತಿ ಹೋಗುವ ಸಾಹಸಿಯೂ ಆಗಿದ್ದ. ಪ್ರತ್ಯಕ್ಷ ಇವಕ್ಕೆಲ್ಲಾ ವಿರುದ್ಧ ಮನಸ್ಸಿನವಳು. ಭಾರೀ ಕುಳವೇ ಬೇಕೆಂದೇನಿಲ್ಲ. ಆ ದಿನದ ಬ್ರೆಡ್‌ನ ಖರ್ಚು ತೂಗಿದರೆ ಸಾಕೆನ್ನುವ ಮನಸ್ಥಿತಿಯವಳು. ಸರೀ ರಾತ್ರಿಗೆ ಮನೆಗೆ ಹಿಂತಿರುಗುವಾಗ ಕೈ ತುಂಬಾ ಬಣ್ಣ ಬಣ್ಣದ ನೋಟುಗಳನ್ನು ತಂದು ಎಣಿಸಿ ಸುಖವಾಗಿ ಮಲಗುವಾಗ ಪರಮ ಮುಗುಳ್ನಗುತ್ತಿದ್ದ.